ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದಲ್ಲಿ ಒಂದು 66:11 ಕೆ.ವಿ. 18 6.3 ಎಂ.ವಿ.ಎ., ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಮಂಡಳಿಯ ತಾಂತ್ರಿಕ ಸಮಿತಿಯು ಜೂನ್ 95ರಲ್ಲಿ ಅನುಮೋದನೆ ನೀಡಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 156.5 ಲಕ್ಷ ರೂ. ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1995-96)ರ ಆಯವ್ಯಯದಲ್ಲಿ 20 ಲಕ್ಷ ರೂ.ಗಳನ್ನು ಒದಗಿಸಿದೆ. ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯು ಲಭ್ಯವಿದೆ. ಈ ವಿದ್ಯುತ್ ಉಪಕೇಂದ್ರಕ್ಕೆ ಹಿರಿಯೂರು - ಶಿರಾ 66 ಕೆ.ವಿ. ವಿದ್ಯುತ್ ಲೈನಿನಿಂದ ಸುಮಾರು 16 ಕಿ.ಮೀ. ಉದ್ದದ ಟ್ಯಾಪ್ಪಿನನ್ನು ನಿರ್ಮಾಣ ಮಾಡಬೇಕಾಗಿದ್ದು, ಇದರ ಸಮೀಕ್ಷೆ (ಸರ್ವೆ) ಕಾರ್ಯವನ್ನು ಶೀಘ್ರದಲ್ಲೇ ತೆಗೆದುಕೊಳ್ಳಲಾಗುವುದು. ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಿದೆ.

(iv) ತುಳು ಮತ್ತು ಕೊಂಕಣಿ ಅಕಾಡೆಮಿಗಳಿಗೆ ಅನುದಾನ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 26 ಲಕ್ಷ ತುಳು ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು, ಮತ್ತು ಅಷ್ಟೇ ಸಂಖ್ಯೆಯಲ್ಲಿ ಕೊಂಕಣಿ ಮಾತೃ ಭಾಷೆಯನ್ನು ಮಾತನಾಡುವ ಕನ್ನಡಿಗರು ಇರುವುದರಿಂದ ಈಗಾಗಲೇ ಹಲವು ಶ್ರೇಷ್ಠ ತುಳು ಸಾಹಿತ್ಯ ಹಾಗೂ ಕೊಂಕಣಿ ಸಾಹಿತ್ಯದಲ್ಲಿ ಪ್ರತಿಗಳು ಪ್ರಕಟಣೆ ಆಗಿದ್ದು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾದದ್ದರಿಂದಲೂ ವಿಶ್ವ ತುಳು ಸಮ್ಮೇಳನ ಮತ್ತು ವಿಶ್ವ ಕೊಂಕಣಿ ಸಮ್ಮೇಳವನ್ನು ಸಂಘಟಿಸಿ ಭಾಷೆಯನ್ನು ಇನ್ನಷ್ಟು ಬೆಳಗಿಸಲು ಪ್ರಯತ್ನಿಸುವ ಸಹಕಾರ ಮತ್ತು ಅನುದಾನಳಿಂದ ಕೂಡಿದ ಪ್ರೋತ್ಸಾಹವನ್ನು ಕೊಟ್ಟು ಮುಂದುವರಿಸಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಲ್ಲ. ಅವರಿಂದ ನಾನು ಉತ್ತರವನ್ನು ತರಿಸಿಕೊಡುತ್ತೇನೆ. ಮಾನ್ಯ 'ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

(v) ಕರ್ನಾಟಕ ಸರ್ಕಾರಿ ಸಾಬೂನು ಕಾರ್ಖಾನೆಯ ಪುನರುಜ್ಜೀವನ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, 1992ರಲ್ಲಿ ಬಿ.ಐ.ಎಫ್.ಆರ್.ನಲ್ಲಿ ನೋಂದಣಿ ಮಾಡಲಾಗಿರುವ ಕರ್ನಾಟಕ ಸರ್ಕಾರೀ ಸಾಬೂನು ಕಾರ್ಖಾನೆಯ ಪುನರುಜ್ಜೀವನವನ್ನು ಕುರಿತು ಇದುವರೆಗೆ ರಾಜ್ಯಸರ್ಕಾರ ಯಾವುದೇ ವರದಿಯನ್ನೂ ಸಲ್ಲಿಸಿಲ್ಲ. 9-8-95ರಂದು ಬಿ.ಐ.ಎಫ್.ಆರ್. ಸಭೆ ನವದೆಹಲಿಯಲ್ಲಿ ನಡೆದಾಗ ಸರ್ಕಾರದ ಕಡೆಯಿಂದ ಯಾವುದೇ ಜವಾಬ್ದಾರಿಯುತ ಅಧಿಕಾರಿ ಅಲ್ಲಿ ಭಾಗವಹಿಸಲಿಲ್ಲ. ಅಲ್ಲಿಯ ನ್ಯಾಯಾಧೀಶರು ಕಳೆದ 3 ವರ್ಷದಿಂದಲೂ ರಾಜ್ಯಸರ್ಕಾರ ಸಬೂಬು ಹೇಳುತ್ತಾ ಬಂದು ಪುನರುಜ್ಜೀವನಗೊಳಿಸುವ ಕುರಿತು ಯಾವುದೇ ವರದಿಯನ್ನೂ ಸಲ್ಲಿಸದೇ ಇರುವ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಆತಂಕ ತರುವ ವಿಚಾರವೆಂದರೆ 2 ತಿಂಗಳೊಳಗಾಗಿ ರಾಜ್ಯಸರ್ಕಾರ ಈ ಕಾರ್ಖಾನೆಯ ಪುನರುಜ್ಜೀವನದ ಬಗ್ಗೆ ವರದಿಯನ್ನು ಸಲ್ಲಿಸದಿದ್ದರೆ ಸಾಬೂನು ಕಾರ್ಖಾನೆಯನ್ನು ಹರಾಜು ಮಾಡಲು ಐ.ಡಿ.ಬಿ.ಐ. ಬ್ಯಾಂಕಿಗೆ ಬಿ.ಐ.ಎಫ್.ಆರ್. ಆದೇಶವನ್ನು ನೀಡಿದೆ. ಈ ಗಂಭೀರ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಾ

ಕರ್ನಾಟಕ ಹೆಮ್ಮೆಯ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸುವ ಯಾವುದೇ ಪ್ರಯತ್ನವನ್ನೂ ಮಾಡದೆ 2.5 ಕೋಟಿ ರೂ.ಗಳ ಭದ್ರತೆಯನ್ನು ನೀಡಿ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವ ವರದಿಯನ್ನು ಸಲ್ಲಿಸಬೇಕೆಂದು ನಾನು ಸರಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಅನುಭವಿಸುತ್ತಾ ಬಂದಿರುವ ಹಾನಿಯಿಂದಾಗಿ 1992ಡಿಸೆಂಬರ್ನಲ್ಲಿ ಬಿ.ಐ.ಎಫ್.ಆರ್.ನಲ್ಲಿ ನೋಂದಾವಣೆ ಮಾಡಬೇಕಾಯಿತು (ಖಟ್ಲೆ 629:92) ಬಿ.ಐ.ಎಫ್.ಆರ್. 1993 ಫೆಬ್ರವರಿ 15ರಂದು ಮೊದಲಿನ ಸಭೆ ಕರೆಯಿತು. ಕಂಪನಿಯು 1993 ನವೆಂಬರ್ 3ರಂದು ಕಳುಹಿಸಿದ ಪುನರ್ಸಜ್ಜೀಕರಣ ಪ್ರಸ್ತಾವನೆಯನ್ನು ಪರಿಶೀಲಿಸಿ ಸಮಂಜಸವಾದ ಒಂದು ಪರಿಷ್ಕೃತ ಪ್ರಸ್ತಾವನೆಯನ್ನು ಕಳುಹಿಸುವಂತೆ ತಿಳಿಸಲಾಗಿತ್ತು. ಆ ನಂತರ ಕಂಪನಿಯು ಕಳುಹಿಸಿದ 23-5-1994 ಮತ್ತು 27-6-1994ರ ಪರಿಷ್ಕೃತ ಪುನರುಜ್ಜೀವನ ಯೋಜನೆಯನ್ನು ಸುಧೀರ್ಘವಾಗಿ ಪರಿಶೀಲಿಸಿ ಸರ್ಕಾರವು ಅನುಮೋದನೆ ನೀಡಿದ ಮೇಲೆ ಕಂಪನಿಯ ಮೂಲಕ ಐ.ಡಿ.ಬಿ.ಐ. ಸಂಸ್ಥೆಗೆ (ಆಪರೇಟಿಂಗ್ ಏಜನ್ಸಿ) ದಿನಾಂಕ 29-8-1994ರಂದು ಕಳುಹಿಸಲಾಯಿತು. ಪುನಃ ಸದರಿ ಪ್ರಸ್ತಾವನೆಯನ್ನು ಆಪರೇಟಿಂಗ್ ಏಜನ್ಸಿಯೊಂದಿಗೆ ಸಮಾಲೋಚಿಸಿ ಅದರ ಸಲಹೆಯ ಪ್ರಕಾರ ಪ್ರಸ್ತಾವದಲ್ಲಿ ಕೆಲವು ಬದಲಾವಣೆಗಳನ್ನು ತಂದು ಜೂನ್ 1995ರಲ್ಲಿ ಮತ್ತೆ ಕಳುಹಿಸಲಾಯಿತು. ಈ ರೀತಿ ಕಳುಹಿಸಿದ ಪ್ರಸ್ತಾವನೆಯನ್ನು ಅಮೂಲಾಗ್ರಮವಾಗಿ ಪರಿಶೀಲಿಸಿದ ನಂತರ ಐ.ಡಿ.ಬಿ.ಐ. ತಮ್ಮದೇ ಆದ ಒಂದು ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ 4-8-1995ರಂದು ಬೊಂಬಾಯಿಯಲ್ಲಿ ಕಂಪನಿಯ ಅಧಿಕಾರಿಗಳು, ರಾಜ್ಯ ಸರ್ಕಾರದ ಪ್ರತಿನಿಧಿಗಳು ಹಾಗೂ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸದರಿ ಪ್ರಸ್ತಾವನೆಯನ್ನು ಬಿ.ಐ.ಎಫ್.ಆರ್. ಮುಂದೆ ಮಂಡಿಸುವ ಕುರಿತು ಚರ್ಚೆ ನಡೆಸಿತು. ಪ್ರಸ್ತಾವನೆಯಲ್ಲಿ ಅಡಕವಾಗಿದ್ದ ಏಕಕಾಲೀನ ಸಂದಾಯದ ನಿಲುವು ಬ್ಯಾಂಕುಗಳಿಗೆ ಒಪ್ಪಿಗೆಯಾಗದ ಕಾರಣ ದಿನಾಂಕ 9-8-1995ರಂದು ನಡೆದ ಬಿ.ಐ.ಎಫ್.ಆರ್.ನ ಹಿಯರಿಂಗ್ನಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತಹ ಪ್ರಸ್ತಾವನೆಯನ್ನು ಮರು ಮಂಡಿಸುವುದಾಗಿ ತಿಳಿಸಿದ ಮೇರೆಗೆ ಬಿ.ಐ.ಎಫ್.ಆರ್. ಸೆಪ್ಟೆಂಬರ್ 30ರ ಒಳಗೆ ಅಂತಹ ಒಂದು ಯೋಜನೆಯನ್ನು ತಯಾರಿಸಿ ಮಂಡಿಸುವಂತೆ ಸೂಚಿಸಿತು. ಸದರಿ ಸೂಚನೆಗೆ ಅನುಸಾರವಾಗಿ ದಿನಾಂಕ 28-8-1995ರಂದು ಸರ್ಕಾರದ ಮಟ್ಟದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ತುರ್ತು ಸಭೆ ನಡೆಸಿ ಎಲ್ಲರೂ ಒಪ್ಪುವಂತಹ ಒಂದು ಯೋಜನೆಯನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಪುನರುಜ್ಜೀವನಗೊಳಿಸುವ ದಿಸೆಯಲ್ಲಿ ತಯಾರಿಸುವ ಬಗ್ಗೆ ತೀರ್ಮಾನಿಸಲಾಯಿತು. ಬಹುತೇಕವಾಗಿ ಬಿ.ಐ.ಎಫ್.ಆರ್. ಆದೇಶದಂತೆ ಸೆಪ್ಟೆಂಬರ್ 30ರ ಒಳಗೆ ಪರಿಷ್ಕೃತ ಪುನರುಜ್ಜೀವನ ಯೋಜನೆಯನ್ನು ಮಂಡಿಸಲು ಕ್ರಮ ಕೈಗೊಳ್ಳಲಾಗುವುದು.

ದಿನಾಂಕ 9-8-1995ರಂದು ನಡೆದ ಬಿ.ಐ.ಎಫ್.ಆರ್. ಹಿಯರಿಂಗ್ನಲ್ಲಿ ಕಂಪನಿಗೆ ನಿಯೋಜನೆಯ ಮೇಲೆ ಇರುವ ಸರ್ಕಾರದ ಹಿರಿಯ ಅಧಿಕಾರಿಯಾದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಲ್ಲದೆ ಕರ್ನಾಟಕ ಸ್ಥಳೀಯ ಆಯುಕ್ತರ ಕಛೇರಿಯ ಒಬ್ಬ ಅಧಿಕಾರಿಯೂ ಸಹ ಹಾಜರಿದ್ದರು.